ವ್ಯಾಲ್ಯುಯೇಶನ್ ಮಾಡಿ 20 ಪರ್ಸೆಂಟ್ ಜಾಸ್ತಿ ಮಾಡಿದರೆ ಒಂದು ಎಕರೆಗೆ 20 ಸಾವಿರ ಇದ್ದರೆ 20 ಪರ್ಸೆಂಟ್ ಜಾಸ್ತಿ ಮಾಡಿದರೂ ಕೂಡ ಕೇವಲ 24 ಸಾವಿರ ರೂಪಾಯಿಗಳು ಮಾತ್ರ ಆಗುವುದು. ಹಾಗಾದರೆ ಹಿಂದೆ 1996ರಲ್ಲಿ ಯಾವ ಆಧಾರದ ಮೇಲೆ ಭೂಮಿಯ ವ್ಯಾಲ್ಯೂ ನಿಗದಿ ಮಾಡಿದಿರಿ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ. ಇನ್ನು ಸುಪ್ರೀಂಕೋರ್ಟ್ ಆದೇಶವಿದ್ದರೂ ಕೂಡ ಆ ಪ್ರಕಾರ ನಮ್ಮ ಕ್ಷೇತ್ರದಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಅಗತ್ಯವಾದ ಕಾರ್ಯ ಜಾರಿಗೆ ಬರಲೇ ಇಲ್ಲ. ಇದಕ್ಕೂ ಸ್ಪಷ್ಟ ಉತ್ತರವನ್ನು ಕೊಡಬೇಕು.

ಶ್ರೀ ಎಸ್.ಆರ್. ಮೋರೆ : ಭೂಮಿಯನ್ನು ತೆಗೆದುಕೊಳ್ಳುವ ಪ್ರಕ್ರಿಯೆ ನಡೆಯುತ್ತಾ ಇದೆ. ಈಗಾಗಲೇ ರೈತರು ನಮಗೆ ಭೂಮಿಯನ್ನು ಕೊಟ್ಟುಬಿಟ್ಟಿದ್ದರೆ ಇಷ್ಟೊತ್ತಿಗೆ ಆ ಕೆಲಸ ಮುಗಿದುಹೋಗುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರೆ, ಒಂದು ಎಕರೆಗೆ 50 ರಿಂದ 60 ಸಾವಿರ ರೂಪಾಯಿಗಳ ಬೆಲೆ ನಿಗದಿ ಮಾಡಿದರೆ ಭೂಮಿಯನ್ನು ಕೊಡುವುದಕ್ಕೆ ರೈತರು ರೆಡಿ ಇದ್ದಾರೆ. ಅದನ್ನು ಬಿಟ್ಟು ನೀವು 20 ಸಾವಿರ ರೂಪಾಯಿಗಳಿಗೆ ರೈತರಿಂದ ತೆಗೆದುಕೊಂಡರೆ ರೈತ ಹಾಳಾಗಿಹೋಗುತ್ತಾನೆ. ರೈತ ಹೇಗೆ ಬದುಕಲು ಸಾಧ್ಯವಾಗುತ್ತದೆ ಹೇಳಿ. ರೈತ 50 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನನ್ನು ಬಿಟ್ಟುಕೊಡಲು ರೆಡಿ ಇರುವುದರಿಂದ ಆ ಬೆಲೆಗೆ ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಜಮೀನು ಕೂಡ ಇರುವುದರಿಂದ ಈ ಬಗ್ಗೆ ಪರಿಶೀಲನೆಯನ್ನು ಮಾಡಿ ಭೂಮಿಯನ್ನು ಖರೀದಿ ಮಾಡಲು ವ್ಯವಸ್ಥೆಯನ್ನು ಮಾಡಿ.

ಶ್ರೀ ಎಸ್.ಆರ್. ಮೋರೆ : ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಬಸವರಾಜ ಭೀಮಪ್ಪ ಹಿತ್ನಾಳ್.ಕೆ. ಇವರು ಕೇಳಿರುವ ಪ್ರಶ್ನೆಗೆ ಉತ್ತರ ಇನ್ನೂ ಬಂದಿರುವುದಿಲ್ಲವಾದ ಕಾರಣ ಮುಂದಿನ ಪ್ರಶ್ನೆಗೆ ಹೋಗೋಣ.

ಬೆಂಗಳೂರಿನ ರಾಜಾಜಿನಗರದ ಬಳಿ ನಿರ್ಮಿಸುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿಯ ಪ್ರಗತಿ

22 (255) : ಶ್ರೀ ವಿ. ಸೋಮಣ್ಣ. ಎಂ.ಎಲ್.ಎ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ರಾಜಾಜಿನಗರದ ಬಳಿ ಗ್ರೇಡ್ ಸಪರೇಟರ್ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ:

ಆ) ಇದರ ಅಂದಾಜು ವೆಚ್ಚವೆಷ್ಟು ಹಾಗೂ ಇದನ್ನು ಯಾವ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು;

ಇ) ಈ ಕಾಮಗಾರಿಯನ್ನು ಯಾರಿಗೆ ಗುತ್ತಿಗೆಗೆ ನೀಡಲಾಗಿದೆ;

ಈ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಉ) ಈ ಕಾಮಗಾರಿ ಕೆಲಸ ಮಂದಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು;

ಊ) ಈ ಕಾಮಗಾರಿ ವಿಳಂಬದಿಂದ ವಾಹನ ಸಂಚಾರ ವ್ಯತ್ಯಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಇತ್ತೀಚಿನ ಪ್ರಗತಿಯ ವಿವರಗಳನ್ನು ನೀಡುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಗುತ್ತಿಗೆ ಕರಾರಿನ ಪ್ರಕಾರ ದಿನಾಂಕ 10.10.2003 ರಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಆ) ಸಿವಿಲ್ ಕಾಮಗಾರಿ ಮತ್ತು ಭೂಸ್ವಾಧೀನದ ವೆಚ್ಚ ರೂ. 11.84+4.00 = 15.84 ಕೋಟಿಗಳು.
ಕಾಮಗಾರಿಯ ಅವಧಿ 18 ತಿಂಗಳು.
ದಿನಾಂಕ 10.3.2005 ರೊಳಗೆ ಪೂರ್ಣಗೊಳಿಸಬೇಕಾಗಿದೆ.

ಇ) ಮೆ: ಎನ್.ಸಿ.ಸಿ.ಎಲ್–ಎಸ್.ಜೆ.ಆರ್.ಐ.ಪಿ.ಎಲ್ (ಜೆ.ವಿ) ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ.

ಈ) ಭೂಸ್ವಾಧೀನಕ್ಕಾಗಿ ರೂ. 400.00 ಲಕ್ಷಗಳು,
ಕಾಮಗಾರಿಗಾಗಿ ರೂ. 640.00 ಲಕ್ಷಗಳು
ಇಲ್ಲಿಯವರೆಗೆ ಒಟ್ಟು 1040.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಉ) ಭೂಸ್ವಾಧೀನ ಪ್ರಕ್ರಿಯೆ, ನೀರಿನ ಕೊಳವೆ, ವಿದ್ಯುಚ್ಛಕ್ತಿ ಕೇಬಲ್ ಇತ್ಯಾದಿಗಳನ್ನು ಸ್ಥಳಾಂತರಿಸಬೇಕಾದ ಕಾರಣ ಕಾಮಗಾರಿಗಳ ಪ್ರಗತಿ ಕುಂಠಿತವಾಗಿದೆ.

ಊ) ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ಕೊಡಲಾಗಿದೆ.

ಋ) ಮೆ–2005ರ ಒಳಗಡೆ ಕಾಮಗಾರಿ ಪೂರ್ಣಗೊಳಿಸಲು ಶ್ರಮಿಸಲಾಗುತ್ತದೆ. ಕಾಮಗಾರಿಯ ಪ್ರಗತಿಯ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಅನುಬಂಧ–

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವಿ.ಸೋಮಣ್ಣ ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂ.255– ರಾಜಾಜಿನಗರ ಪ್ರವೇಶ ದ್ವಾರದಲ್ಲಿ ನಡೆಯುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿಯ ಇತ್ತೀಚಿನ ಪ್ರಗತಿಯ ವಿವರಗಳು.

1.	ಗ್ರಾಮ ಮಂದಿರದ ಕಡೆಯ ರ್ಯಾಂಪ್	–	ಶೇ. 90 ರಷ್ಟು ಪೂರ್ಣಗೊಂಡಿದೆ
2.	ಸುಜಾತ ಚಿತ್ರಮಂದಿರದ ಕಡೆ ರ್ಯಾಂಪ್	–	ಶೇ. 40 ರಷ್ಟು ಪೂರ್ಣಗೊಂಡಿದೆ
3.	ಅಂಡರ್ ಪಾಸ್‌ನ ಮೇಲ್ಛಾವಣಿ ಭಾಗ	–	ಶೇ. 45 ರಷ್ಟು ಪೂರ್ಣಗೊಂಡಿದೆ
4.	ಮಳೆ ನೀರು ಚರಂಡಿಗೆ ಸೇತುವೆ ಭಾಗ–1	–	ಶೇ. 50 ರಷ್ಟು ಪೂರ್ಣಗೊಂಡಿದೆ
5.	ಮಳೆ ನೀರು ಚರಂಡಿಗೆ ಸೇತುವೆ ಭಾಗ–2	–	ಶೇ. 40 ರಷ್ಟು ಪೂರ್ಣಗೊಂಡಿದೆ
6.	ರಾಜಾಜಿನಗರ ಲಿಂಕ್ ರಸ್ತೆ ಅಗಲೀಕರಣ	–	ಶೇ. 40 ರಷ್ಟು ಪೂರ್ಣಗೊಂಡಿದೆ

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇರತಕ್ಕಂಥ ಕಳಕಳಿಯ ಅರಿವೂ ಕೂಡ ನನಗೆ ಇದೆ. ಈಗಾಗಲೇ, ಟರ್ನ್ ಕೀ ಬೇಸಿಸ್‌ನಲ್ಲಿ ರಾಜಾಜಿನಗರ ಗ್ರೇಡ್ ಸಪರೇಟರ್‌ನ್ನು ಪ್ರಾರಂಭ ಮಾಡಿ ಅವರಿಗೆ ವರ್ಕ್ ಆರ್ಡರ್ ಕೊಡುವುದಕ್ಕೆ ಮುಂಚಿತವಾಗಿಯೇ ಅಲ್ಲಿಯ ಎಲ್ಲಾ ಪ್ರಕ್ರಿಯೆಗಳನ್ನು ಅಂದರೆ ಲ್ಯಾಂಡ್ ಅಕ್ವಿಸೆಶನ್ ಮತ್ತು ಎಲ್ಲವನ್ನೂ ಕೂಡ ಮುಗಿಸಿ 18 ತಿಂಗಳುಗಳಲ್ಲಿ ಗ್ರೇಡ್ ಸೆಪರೇಟರ್ ವರ್ಕ್ ಮುಗಿಸುವಂತೆ ಅವರಿಗೆ ಪಹಿಸಿಕೊಟ್ಟೆವು. 18 ತಿಂಗಳುಗಳ ಕಾಲವನ್ನು ಕೊಟ್ಟಾದ ಮೇಲೂ ಕೂಡ ಇನ್ನೂ ಅದು

ಕಂಪ್ಲೀಟ್ ಆಗಿಲ್ಲ. ನನಗೆ ಈಗ ಸನ್ಮಾನ್ಯ ಮುಖ್ಯಮಂತ್ರಿಗಳ ಮುಖೇನ ಅಧಿಕಾರಿಗಳು ಉತ್ತರ ಕೊಡಿಸಿದ್ದಾರೆ. 18 ತಿಂಗಳುಗಳ ಅವಧಿ ಮುಂದಿನ ತಿಂಗಳಿಗೆ ಮುಗಿಯುತ್ತಿದೆ. ಆದರೆ ಅಲ್ಲಿ ಶೇಕಡ 40 ರಷ್ಟೂ ಕಾಮಗಾರಿ ಕಾರ್ಯ ಮುಗಿದಿಲ್ಲ. ವಿಜಯನಗರದ ಕಡೆ, ಮಾಗಡಿ ರಸ್ತೆ ಕಡೆ ಬರತಕ್ಕಂಥ ಎಲ್ಲಾ ವಾಹನಗಳೂ ಕೂಡ ಅದೊಂದೇ ಮಾರ್ಗದಲ್ಲಿ ಹೋಗುತ್ತಿರುವುದರಿಂದ ಯಾವ ರೀತಿ ಅಲ್ಲಿ ಬೆಳಿಗ್ಗೆ ಹೊತ್ತು, ಸಾಯಂಕಾಲದ ಹೊತ್ತು, ಪೀಕ್ ಹವರ್ಸ್‌ನಲ್ಲಿ ಎಷ್ಟೊಂದು ತೊಂದರೆಯಾಗುತ್ತಿದೆಯೆಂದರೆ ವಾಹನಗಳನ್ನು ಅಲ್ಲಿ ಓಡಿಸುವುದೇ ಕಷ್ಟವಾಗಿದೆ. ಈ ಬಗ್ಗೆ ಅನೇಕ ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಈ ಕಾಮಗಾರಿ ಕಾರ್ಯ ಆಮೆ ವೇಗದಲ್ಲಿ ನಡೆಯುತ್ತಿದೆ. ಇದು ಟರ್ನ್ ಕೀ ಬೇಸಿಸ್‌ನಲ್ಲಿ ಆಗುತ್ತಿರುವುದರಿಂದ ಅದಕ್ಕೆ ವೇಚ್ಚ ಕಡಿಮೆ ಮಾಡುವುದೇ ಆಗಲಿ, ಹೆಚ್ಚು ಮಾಡುವುದೇ ಆಗಲಿ ಆಗದಿರುವುದರಿಂದ ಗುತ್ತಿಗೆದಾರ ತನ್ನ ಅವಧಿಯಲ್ಲಿಯೇ ಮುಗಿಸಬೇಕಾಗಿರುವುದರಿಂದ ಅದನ್ನು ಆದಷ್ಟು ಬೇಗ ಮುಗಿಸಬೇಕು. ಆದರೆ ಇದು ಮುಗಿಯದಿರುವುದರಿಂದ ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಕೂಡ ಸರಿಯಾಗಿ ಇಲ್ಲದ ಕಾರಣ ಜನರು ವಾಹನಗಳನ್ನು ಓಡಿಸುವುದಕ್ಕೇ ತೊಳಲಾಡುತ್ತಿದ್ದಾರೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ ನನಗೆ ಉತ್ತರದಲ್ಲಿ ಅಲ್ಲಿ ಏನೇನು ಕೆಲಸಗಳಾಗಿವೆ ಎಂದು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದುದಾಗಿದೆ. ಆದಕಾರಣ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ, ಇದನ್ನು ಯಾರಿಗಾದರೂ ಜವಾಬ್ದಾರಿಯುತ ಮುಖ್ಯ ಅಭಿಯಂತರರನ್ನು ಅಥವಾ ಇನ್ನಿತರ ಅಧಿಕಾರಿಗಳನ್ನು ಆ ಕಾಮಗಾರಿ ಬೇಗ ಮುಗಿಸುವಂತೆ ನಿಗದಿ ಮಾಡಬೇಕು. ಇದನ್ನು ಮಾಡದಿದ್ದರೆ ಇನ್ನೂ ಎರಡು ವರ್ಷವಾದರೂ ಕೂಡ ರಾಜಾಜಿನಗರ ಗ್ರೇಡ್ ಸೆಪರೇಟರ್ ಕಾಮಗಾರಿ ಮುಗಿಯುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತಕ್ಷಣವೇ ಕೆಲಸ ಪ್ರಾರಂಭ ಮಾಡಿರುವುದನ್ನು ಮುಗಿಸುವುದಕ್ಕೆ ಒಂದು ವೇಳೆಯನ್ನು ನಿಗದಿಪಡಿಸಬೇಕು. ಇದರ ಬಗ್ಗೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಆದ್ಯತೆ ಮೇರೆಗೆ ಗಮನಹರಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಗೆಳೆಯರಾದಂತಹ ವಿ. ಸೋಮಣ್ಣನವರು ರಾಜಾಜಿನಗರದ ಗ್ರೇಡ್ ಸಪರೇಟರ್ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾನು ನಿನ್ನೆ ಮತ್ತು ಈ ದಿನ ಮಹಾನಗರಪಾಲಿಕೆಯ ಕಮಿಷನರ್ ಜೊತೆ ಮತ್ತು ಇತರ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ಈ ಒಂದು ಪೂರ್ಣ ಕೆಲಸಕ್ಕೆ ಕಾಮಗಾರಿ ಮತ್ತು ಭುಸ್ವಾಧೀನ ವೆಚ್ಚ 11.84 ಹಾಗೂ 4.00 ಕೋಟಿ ರೂಪಾಯಿ ಇದೆ. ಈ ಕಾಮಗಾರಿಯನ್ನು ಅವರು ಹೇಳಿದ ಹಾಗೆ 18 ತಿಂಗಳಲ್ಲಿ ಮುಗಿಸಬೇಕಾಗಿತ್ತು. ಈಗ ಏನಾಗಿದೆ ಎಂದರೆ ಅಲ್ಲಿ ಕೆಲವು ಮಿಲ್ಸ್‌ಗಳು ಬರುತ್ತವೆ. ಮಿನರ್ವ ಮಿಲ್ ಹತ್ತಿರ ಜಾಗ ಬೇಕಾಗಿದ್ದು ಅದನ್ನು ಖರೀದಿ ಮಾಡಿದ್ದಾರೆ. ಅದರ ಬಗ್ಗೆ ನಗರಪಾಲಿಕೆಯವರು ಹಾಗೂ ಭೂಮಾಲೀಕರ ಬಗ್ಗೆ ನೆಗೋಷಿಯೇಷನ್ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂದು ಅಲ್ಲಿ ಕೆಲವು ಚರ್ಚೆ ಮಾಡಿದ್ದಾರೆ. ಅಲ್ಲದೆ ಹೈಕೋರ್ಟ್‌ನ ಫೈನಲ್ ತೀರ್ಮಾನಕ್ಕೆ ಬದ್ಧಗೊಳಿಸಿ ಒಂದು ವರ್ಕಿಂಗ್ ಅರೇಂಜ್‌ಮೆಂಟ್ ಕೂಡ ನಾವು ಮಾಡಿದ್ದೇವೆ. ಅದಕ್ಕೆ ಸ್ವಲ್ಪ ತಡವಾಗಿದೆ. ಈಗ ಬೆಂಗಳೂರು ನಗರದಲ್ಲಿ ಜನಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. ಎಲ್ಲೆಲ್ಲಿ ಫ್ಲೈಓವರ್ ಇದೆ ಅದನ್ನು ಮುಗಿಸಬೇಕೆಂದು ಸರ್ಕಾರದ ದೃಢ ನಿರ್ಧಾರ ಇದೆ. ಮಾನ್ಯ

ಸೋಮಣ್ಣನವರು ಹೇಳಿದ ಹಾಗೆ ಅಧಿಕಾರಿಗಳು ಏನು ಉತ್ತರವನ್ನು ಹೇಳತಕ್ಕಂಥ ರೀತಿಯಲ್ಲಿ ಮಿಸ್‌ಗೈಡ್ ಮಾಡಿದ್ದಾರೆ. ಕೆಲಸ ಆಗುತ್ತಿಲ್ಲ, ಅವರು ಮೇ ತಿಂಗಳ ಒಳಗೆ ಕೆಲಸವನ್ನು ಮಾಡುತ್ತೇವೆಂದು ಖಡಾಖಂಡಿತವಾಗಿ ಹೇಳಿದ್ದಾರೆ ಅದನ್ನೇ ನಾನು ಉತ್ತರದಲ್ಲಿ ಹೇಳಿದ್ದೇನೆ. ಆದರೂ ಕೆಲಸವನ್ನು ಮೇ ತಿಂಗಳ ಒಳಗೆ ಮುಗಿಸುತ್ತೇವೆಂದು ಹೇಳಿದರೂ ಕೂಡ ತಮಗೆ ಏನಾದರೂ ಸಂಶಯವಿದ್ದರೆ, ಈ ಸದನ ಮುಗಿದಮೇಲೆ ನಾನು ಮತ್ತು ಸೋಮಣ್ಣನವರು ಇಬ್ಬರೂ ಸೇರಿ ಕಮಿಷನರ್ ಜೊತೆ, ಇದನ್ನು ಯಾವರೀತಿಯಾಗಿ ಮಾಡುತ್ತಿದ್ದಾರೆ ಹಾಗೂ ಎಲ್ಲಿಯವರೆಗೆ ಪ್ರಗತಿಯಾಗಿದೆ, ಅದಕ್ಕೆ ಸ್ಪೀಡ್‌ಅಪ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳತ್ತೇವೆಂದು ತಮ್ಮ ಮೂಲಕ ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರು ಕೇಳಿರುವಂತಹ ಪ್ರಶ್ನೆ ರಾಜಾಜಿನಗರ ಗ್ರೇಡ್ ಸಪರೇಟರ್ ಕಾಮಗಾರಿ ಕೆಲಸ ಒಂದು ಕಡೆ ನಿಧಾನಗತಿಯಲ್ಲಿ ನಡೆಯುತ್ತಿದೆ. ನಾನು ಈ ಸಭೆಯ ಮುಖಾಂತರ ಸಲಹೆ ಕೊಡುವುದೇನೆಂದರೆ ರಾಜಾಜಿನಗರ ಎಂಟ್ರೆನ್ಸ್ ಕಾರಿಡಾರ್ ರಸ್ತೆ ಏನಿದೆ, ನಾವು ರೈಲ್ವೆ ನಿರ್ಮಾಣದಿಂದ ಬರತಕ್ಕಂಥ ಒಂದು ಮಾರ್ಗ ಈ ಒಂದು ಗ್ರೇಡ್ ಸಪರೇಟರ್ ಕಾಮಗಾರಿ ಆದಮೇಲೆ ಮುಂದೆ ಹೋದಾಗ ಟ್ರಾಫಿಕ್ ಸಾಂದ್ರತೆ ಏನಿದೆ, ಓಕಳಿಪುರ ಮತ್ತು ರೈಲ್ವೆ ಸ್ಟೇಷನ್‌ನಿಂದ ವಾಟಾಳ್ ನಾಗರಾಜ್ ರಸ್ತೆ, ಆ ರಸ್ತೆಗಳಲ್ಲಿ ಇವತ್ತು ಟ್ರಾಫಿಲ್ ಮೂವ್‌ಮೆಂಟ್ ಬಹಳ ತೊಂದರೆ ಇದೆ. ಅದರ ಬಗ್ಗೆ ಮಹಾನಗರ ಪಾಲಿಕೆಯವರು ಮತ್ತು ರೈಲ್ವೆ ಇಲಾಖೆಯವರ ಜೊತೆ ಚರ್ಚೆ ಮಾಡಿದ್ದಾರೆ. ಆ ರಸ್ತೆಯನ್ನೂ ಕೂಡ ನೇರವಾಗಿ ತೆಗೆದುಕೊಳ್ಳಬೇಕೆಂದು ಪ್ರಪೋಸಲ್ ಇದೆ. ಆದುದರಿಂದ ನನ್ನ ಸಲಹೆ ಏನೆಂದರೆ ಗ್ರೇಡ್ ಸಪರೇಟರ್ ರಸ್ತೆ ಜೊತೆಯಲ್ಲಿ ಅದನ್ನು ಕೂಡ ಪ್ರಾರಂಭ ಮಾಡಿಸಿದರೆ ಈ ಒಂದು ರಸ್ತೆ ಮುಗಿದನಂತರ ಅದು ಬಹಳ ಅನುಕೂಲವಾಗುತ್ತದೆ. ಏಕೆಂದರೆ ವಿಜಯನಗರ, ಬಸವೇಶ್ವರ ನಗರ ಹಾಗೂ ಬಿನ್ನಿಪೇಟೆ ಜನರೆಲ್ಲಾ ಈ ಒಂದು ರಸ್ತೆಯಲ್ಲಿ ಬೆಂಗಳೂರು ನಗರ ಮಧ್ಯಭಾಗಕ್ಕೆ ಬರುತ್ತಾರೆ. ಆದುದರಿಂದ ಇದನ್ನು ನೇರವಾಗಿ ಮಾಡಬೇಕೆಂದು ಇದ್ದು, ಇದರ ಬಗ್ಗೆ ರೈಲ್ವೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ರೈಲ್ವೆ ಅಧಿಕಾರಿಗಳು ಭೂಮಿಯನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದನ್ನು ಅವರು ಕಾರ್ಯಗತ ಮಾಡುವುದಕ್ಕೆ ಈ ಸಮಯದಲ್ಲೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಈ ಒಂದು ಪ್ರಶ್ನೆಗೆ ಉಪಪ್ರಶ್ನೆಯ ಮೂಲಕ ಮಾನ್ಯ ದಿನೇಶ್ ಗುಂಡುರಾವ್ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾವು ಕೇಂದ್ರದ ರೈಲ್ವೆ ಸಚಿವರ ಜೊತೆ ಮಾತನಾಡಿದ್ದೇವೆ. ಅವರು ಕೂಡ ಬಂದಾಗ ಇದರ ಬಗ್ಗೆ ಅವರಿಗೆ ಗೊತ್ತಾಗಿದೆ. ಅದರ ಬಗ್ಗೆ ನಾನು ಆ ಏರಿಯಾದಲ್ಲಿ ಹೋಗತಕ್ಕಂಥ ಕಾಲದಲ್ಲಿ ಮಾನ್ಯ ಸೋಮಣ್ಣನವರ ಜೊತೆ ಗ್ರೇಡ್ ಸಪರೇಟರ್ ನೋಡತಕ್ಕಂಥ ಸಂದರ್ಭದಲ್ಲಿ ಇನ್ಸ್‌ಪೆಕ್ಷನ್ ಹೋಗುತ್ತೇನೆ. ಆಗ ಮಾನ್ಯ ದಿನೇಶ್ ಗುಂಡುರಾವ್ ಅವರನ್ನು ಕರೆದುಕೊಂಡು ಹೋಗಿ ಎಲ್ಲಿ ಏನಾಗಬೇಕಾಗಿದೆ ಎನ್ನುವುದನ್ನು ನೋಡಿ ಅದರ ಬಗ್ಗೆ ಸ್ಥಳದಲ್ಲೇ ಆದೇಶವನ್ನು ಕೊಡುತ್ತೇನೆ.